ದಿನಾಂಕ 06-02-2025 ರಂದು ಮಾಡಿದ ಅರ್ಜಿ ನಂಬ್ರ 5 ರ ಆದೇಶದ ಮೇರೆಗೆ ಸಾಕ್ಷಿಯನ್ನು ದಿನಾಂಕ **04-03-2025** ರಂದು ಕರೆದು ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ವಾದಿಯ ಪರವಾಗಿ ಶ್ರೀಮತಿ ಸಿ.ವಿ.ಜಿ. ವಕೀಲರಿಂದಃ**

ನನ್ನ ವಾದಕ್ಕೆ ಪೂರಕವಾಗಿ ದಿನಾಂಕ 24-12-1999 ರಂದು ಪ್ರಭಾಕರ ಗೌಡರು ಚಂದ್ರಶೇಖರರವರ ಮಗನಿಗೆ ಬರೆದುಕೊಟ್ಟ ವೀಲುನಾಮೆಗೆ ನಾನು 2ನೇ ಸಾಕ್ಷಿದಾರನಾಗಿ ಸಹಿಯನ್ನು ಹಾಕಿದ್ದು, ಈಗ ಸದರಿ ವೀಲುನಾಮೆಯನ್ನು ನಾನು ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-10 ಎಂದು, ನಿಪಿ-10 ರ ದಾಖಲೆಯ ನಾನು 2ನೇ ಸಾಕ್ಷಿದಾರನಾಗಿ ಸಹಿ ಮಾಡಿದ್ದು, ಸದರಿ ಸಹಿಗಳನ್ನು ನಾನು ಈಗ ನೋಡಿ ಒಪ್ಪಿದ್ದು, ಅವುಗಳನ್ನು ನಿಪಿ-10(ಹೆಚ್) ಹಾಗೂ ನಿಪಿ-10(ಐ) ಎಂದು ಗುರುತಿಸಲಾಯಿತು. ನಿಪಿ-10 ರ ವೀಲುನಾಮೆಯನ್ನು ಬರೆದ ಪ್ರಭಾಕರ ಗೌಡರ ಸಹಿಗಳನ್ನು ನೋಡಿ ಗುರುತಿಸುತ್ತೇನೆ.

ಆದ್ದರಿಂದ ನನ್ನ ವಾದಪತ್ರದಲ್ಲಿ ಹೇಳಿದಂತೆ ಡಿಕ್ರಿ ಮಾಡಬೇಕಾಗಿ ಪ್ರಾರ್ಥನೆ.

**ಪಾಟೀ ಸವಾಲುಃ ಪ್ರತಿವಾದಿಯ ಪರವಾಗಿ ಶ್ರೀ ಹೆಚ್.ಪಿ. ವಕೀಲರಿಂದಃ**

**ಸಾಕ್ಷಿಯ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ ಮೇರೆಗೆ ಕಾಲಾವಕಾಶ ನೀಡಲಾಯಿತು.**

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿರುತ್ತಾರೆ.

ಸಾಕ್ಷಿಯ ಸಹಿ

ವ್ಯವಹಾರಿಕ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾಯಿಕ ದಂಡಾಧಿಕಾರಿಯವರು, ಸುಳ್ಯ, ದ.ಕ.

This is a True Copy of the Court Records Online. Authenticated @ districts.ecourtsindia.com/cnr/KADK410001622020/truecopy/order-6.pdf

www.ecourtsindia.com

www.ecourtsindia.com

This is a True Copy of the Court Records Online. Authenticated @ districts.ecourtsindia.com/cnr/KADK410001622020/truecopy/order-6.pdf